<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>

**<u>ಕೆ.ಆರ್.ನಗರ</u>**

**<u>ಒ.ಎಸ್ 129/2018</u>**

**ಪಿಡಬ್ಲ್ಯೂ1**

**<u>ದಿನಾಂಕ 05-10-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು ಶ್ರೀ. ಬಿ ಕೆ ಎನ್ ವಕೀಲರಿಂದ ಪ್ರತಿವಾದಿ ಪರ ವಕೀಲರುಃ</u>

ನನ್ನ ಮುಖ್ಯ ವಿಚಾರಣೆ ಆಂಗ್ಲ ಭಾಷೆಯಲ್ಲಿದ್ದು ಅದರಲ್ಲಿರುವ ವಿಚಾರ ನನಗೆ ಗೊತ್ತಿದೆ. ನಿಪಿ 1ನ್ನು ನಾನೇ ಹೇಳಿ ಬರೆಸಿದ್ದೇನೆ ಅದನ್ನು ಗ್ರಾಮದವರು ಬರೆದು ಕೊಟ್ಟಿದ್ದಾರೆ. ನಿಪಿ 1 ನಮ್ಮ ಕುಟುಂಬದ ಸ್ಪಷ್ಟವಾದ ವಂಶವೃಕ್ಷವಲ್ಲ ಎಂದರೆ ಸರಿಯಲ್ಲ. ಸದರಿ ವಂಶವೃಕ್ಷವನ್ನು ನಾನು ಬರೆಸಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಅವಶ್ಯಕ ಪಕ್ಷಗಾರರನ್ನು ನಾನು ಸೇರಿಸಿಲ್ಲ ಎಂದರೆ ಸರಿಯಲ್ಲ.

2. ನನ್ನ ಗಂಡ ಬದುಕಿರುವ ಸಮಯದಲ್ಲಿ ನನ್ನ ಗಂಡ ಹಾಗೂ ಪ್ರತಿವಾದಿಗಳ ನಡುವೆ ಕುಟುಂಬದ ಸ್ವತ್ತಿನ ಸಂಬಂಧ ವಿವಾದವಾಗಿತ್ತು ಎಂದರೆ ಸರಿಯಲ್ಲ. ಎರಡು ಮತ್ತು 4 ನೇ ಪ್ರತಿವಾದಿಗೆ ದಾವಾ ಐಟಂ 2 ಮತ್ತು 1 ಕ್ರಮವಾಗಿ ಸಾಗುವಳಿ ಚೀಟಿ ಮೂಲಕ ಬಂದಿದೆ ಎಂದರೆ ಸರಿ. ದಾವ ಐಟಂ 2 ರಲ್ಲಿ ನಿಪಿ 3 ರಂತೆ ನಾಲ್ಕನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ನಿಪಿ 4 ನಾನು ಸೃಷ್ಟಿಸಿರುವ ದಾಖಲೆ ಎಂದರೆ ಸರಿಯಲ್ಲ. ನಿಪಿ 4 ರಲ್ಲಿ ಕ್ರಮ ಸಂಖ್ಯೆ 10 ಸರ್ವೆ ನಂಬರ್ 87 ಜಾಗದಲ್ಲಿ ತಿದ್ದುಪಡಿ ಮಾಡಲಾಗಿದೆ, ಸದರಿ ತಿದ್ದುಪಡಿಯನ್ನು ನಾನೇ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 4 ನ್ನು ದಾವಾ ಐಟಂ 2 ನ್ನು ನಾನೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

3. ನಿಪಿ 5 ರಂತೆ ದರಕಾಸ್ತು ಮೂಲಕ ದಾವಾ ಐಟಂ 1 ಬಂದಿದೆ ಸರಿಯಲ್ಲ. ಅದು ಪಿತ್ರಾರ್ಜಿತ ಆಸ್ತಿಯೆಂದು ಸಾಕ್ಷಿಯು ನುಡಿಯುತ್ತಾರೆ. ಪಿತ್ರಾರ್ಜಿತ ಆಸ್ತಿ ಎಂದು ಹೇಳಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ದಾವಾ ಐಟಂ 2 ರ ಮೇಲೆ 4 ನೇ ಪ್ರತಿವಾದಿ ಸಾಲ ಸಹ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು

ಪ್ರತಿವಾದಿಗಳ ಸ್ವಯಾರ್ಜಿತ ಆಸ್ತಿ ಯಾಗಿದ್ದು ಅವುಗಳ ಪಿತ್ರಾಜಿತ ಆಸ್ತಿಯೆಂದು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ಮಾವರವರಿಗೆ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಾವರವರ ಹೆಸರಿನಲ್ಲಿ ಆಸಿಗಳು ಇತ್ತು ಎಂದು ಹೇಳಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಒದಗಿಸಲು ತೊಂದರೆ ಇಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ